ಮೂಲ ದಾವೆ ನಂ.11/2017

ಪಿ.ಡಬ್ಲ್ಯೂ.1

ದಿನಾಂಕಃ 16.09.2023
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರೆದ ಪಾಟೀ ಸವಾಲು 1 ರಿಂದ 9 ನೇ ಪ್ರತಿವಾದಿ ಪರ ಶ್ರೀ ಎಸ್.ಎಸ್. ವಕೀಲರಿಂದ ಃ

ದಾವಾ ಆಸ್ತಿಯ ಸರ್ವೆ ನಂಬರ 1 ರಲ್ಲಿನ ಪ್ಲಾಟ್‌ಗಳನ್ನು ಯಾವ ವ್ಯಕ್ತಿ ಎಷ್ಟು ಮೊತ್ತಕ್ಕೆ ಖರೀದಿ ಮಾಡಿರುತ್ತಾರೆ ಮತ್ತು ಅದನ್ನು ಯಾರು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ 1 ರಲ್ಲಿನ ಪ್ಲಾಟ್‌ಗಳನ್ನು ಖರೀದಿಸಿದ ವ್ಯಕ್ತಿಗಳನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುತ್ತೇವೆ. ಆ ಪ್ಲಾಟಗಳನ್ನು ಖರೀದಿಸಿದ ಬಗ್ಗೆ ಕ್ರಯ ಪತ್ರಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಈ ದಾವೆಯಲ್ಲಿನ ಪ್ರತಿವಾದಿಗಳ ಪೈಕಿ ಯಾವ ವ್ಯಕ್ತಿ ಯಾವ ನಂಬರಿನ ಪ್ಲಾಟಗಳನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ಮನೆತನದ ಆಸ್ತಿಗಳ ಪೈಕಿ ಕೆಲವೊಂದು ಆಸ್ತಿಗಳನ್ನು ನನ್ನ ತಂದೆಯ ಜೀವಿತ ಕಾಲದಲ್ಲಿ ಮತ್ತು 1 ಮತ್ತು 2 ನೇ ಪ್ರತಿವಾದಿಯರು ನಮ್ಮ ತಂದೆಯ ಮರಣದ ನಂತರ ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 9 ರಿಂದ 11 ನೇ ಪ್ರತಿವಾದಿಗಳನ್ನು ಈ ದಾವೆಯಲ್ಲಿ ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದು ಕೇಳಲಾದ ಪ್ರಶ್ನೇಗೆ ಸಾಕ್ಷಿಯು ಕೆಲವು ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನಲ್ಲಿ ಅವರ ಹೆಸರು ನಮೂದು ಆಗಿರುವುದರಿಂದ ಅವರನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುತ್ತೇನೆ ಎಂದು ಹೇಳುತ್ತಾರೆ. ಕೆಲವು ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ 9 ರಿಂದ 11 ನೇ ಪ್ರತಿವಾದಿಯವರ ಹೆಸರು ಯಾವ ಆಧಾರದ ಮೇಲೆ ನಮೂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಕ್ಕಳು 3 ಮತ್ತು 5 ನೇ ಪ್ರತಿವಾದಿಯರು ಹಾಗೂ 2 ನೇ ಪ್ರತಿವಾದಿಯ ಮಕ್ಕಳು 7 ಮತ್ತು 8 ನೇ ಪ್ರತಿವಾದಿಯರು ಕೆಲವೊಂದು ಆಸ್ತಿಗಳನ್ನು ಖೀರಿದಿ ಮಾಡಿರುತ್ತಾರೆ ಎಂದರೆ ಸರಿ, ಆದರೆ ಅವರು ಯಾವ ಸರ್ವೆ ನಂಬರಿನ ಜಮೀನುಗಳನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತ ಮುಂದುವರೆದು ಅವರುಗಳು ನಮ್ಮ ತಂದೆಯ ಅಸ್ತಿಯ ಮೇಲಿಯೇ ಬೇರೆ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. 3,5,7 ಮತುತ 8 ನೇ ಪ್ರತಿವಾದಿಯರು ಯಾವ ವ್ಯಕ್ತಿಗಳಿಂದ, ಯಾವ ದಿನಾಂಕದಂದು ಮತ್ತು ಎಷ್ಟು ಹಣಕ್ಕೆ ಜಮೀನುಗಳನ್ನು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಆಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ಖರೀದಿ ಪತ್ರಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. 8 ನೇ ಪ್ರತಿವಾದಿ ಬ್ಯಾಂಕ್ ನಲ್ಲಿ ನೌಕರಿ ಮಾಡುತ್ತಿದ್ದು ಆತನ್ನು ತನ್ನ ಸ್ವಂತ ಆದಾಯದಿಂದ ಜಮೀನುಗಳನ್ನು ಖರೀದಿಸಿರುತಾರೆ ಎಂದರೆ ಸರಿಯಲ್ಲ. 3,5,7 ಮತ್ತು 8 ನೇ

ಪ್ರತಿವಾದಿಯರು ನಮ್ಮ ತಂದೆಯ ಆಸ್ತಿಯ ಆದಾಯ ಮೇಲೆ ಬೇರೆ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ನಂಬರ 1 ರಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಕಟ್ಟಿರು ಹೊಸ ಮನೆಗಳನ್ನು ಯಾರ ಹೆಸರಿನಲ್ಲಿ ಇರುತ್ತದೆ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ಅವುಗಳು ವೆಂಕಟರೆಡ್ಡಿ ಮತ್ತು ಮಲ್ಲಿಕಾರ್ಜುನಗೌಡ ಇವರುಗಳ ಹೆಸರಿನಲ್ಲಿ ಇರುತ್ತವೆ ಎಂದು ಹೇಳುತ್ತಾರೆ. ನನ್ನ ತಂದೆಯ ಕೈಮೇಲಿನ 5 ಮನೆಗಳು ಇರುತ್ತವೆ. 1 ಮತ್ತು 2 ನೇಪ್ರತಿವಾದಿ ಇವರ ಹೆಸರಿನಲ್ಲಿರುವ ಎರಡು ಮನೆಗಳ ದಾಖಲೆ ಹಾಗೂ ನನ್ನ ತಂದೆಯ ಹೆಸರಿನಲ್ಲಿರುವ 5 ಮನೆಗಳ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಆ ಮನೆಗಳ ನಂಬರಗಳು ನನಗೆ ಹೇಳಲು ಬರುವುದಿಲ್ಲ. ಆ ಮನೆಗಳ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಯ ಮರಣದ ನಂತರ 1 ಮತ್ತು 2 ನೇಪ್ರತಿವಾದಿಯರು ಬೇರೆ ಬೇರೆ ಆಗಿರುತ್ತಾರೆ ಎಂದರೆ ಸರಿಯಲ್ಲ. ಅವರು ಬೇರೆ ಬೇರೆ ಆದ ನಂತರ ತಮ್ಮ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ತಮ್ಮ ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ಅವರು ಸುಳ್ಳು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ತಮ್ಮ ತಮ್ಮ ಹೆಸರಿಗೆ ಯಾವ ಯಾವ ಜಮೀನುಗಳನ್ನು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಕ್ಕಳು ಅವರುಗಳು ಸಹ ಈಗ ಬೇರೆ ಬೇರೆ ಅಗಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಮಕ್ಕಳು ಅವರುಗಳು ಸಹ ಈಗ ಬೇರೆ ಬೇರೆ ಅಗಿರುತ್ತಾರೆ ಎಂದರೆ ಸರಿಯಲ್ಲ. ಅವರು ಬೇರೆ ಬೇರೆ ಆದ ನಂತರ ತಮ್ಮ ತಮ್ಮ ಪಾಲಿಗೆ ಬಂದ ಆಸ್ತಿಗಳನ್ನು ತಮ್ಮ ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ಸುಳ್ಳು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಅವರುಗಳು ತಮ್ಮ ತಮ್ಮ ಹೆಸರಿಗೆ ಯಾವ ಸರ್ವೆ ನಂಬರ ಜಮೀನುಗಳು ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ತಂದೆ 1948 ರಲ್ಲಿ ಮರಣ ಹೊಂದುವ ಕಾಲಕ್ಕೆ ನನ್ನ ವಯಸ್ಸು ಅಂದಾಜು 14 ವರ್ಷ ಇದ್ದಿತ್ತು. ನನ್ನ ತಂಗಿಯ ವಯಸ್ಸು ಆ ಕಾಲಕ್ಕೆ 3 ವರ್ಷ ಆಗಿತ್ತು. ನನ್ನ ಮದುವೆಯನ್ನು ನನ್ನತಾಯಿ ಮತ್ತು 1 ಹಾಗೂ 2 ನೇಪ್ರತಿವಾದಿಯರು ಒಟ್ಟಿಗೆ ಸೇರಿ ಮಾಡಿರುತ್ತಾರೆ. ನನ್ನ ತಂಗಿಯ ಮದುವೆ ನಾನು ಮತ್ತು ನನ್ನ ತಾಯಿ ಸೇರಿ ಮಾಡಿರುತ್ತೇವೆ. ನನ್ನ ತಂಗಿಯ ಮದುವೆಯ ನಂತರ 4-5 ವರ್ಷ ನನ್ನ ತಾಯಿ 1 ಮತ್ತು 2 ನೇಪ್ರತಿವಾದಿಯರ ಮನೆಯಲ್ಲಿ ಇದ್ದಳು, ನಂತರ ಅವಳನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿದ್ದೇವು, ಅವರು ನಮ್ಮ ಮನೆಯಲ್ಲಿ 30 ವರ್ಷಗಳ ವೆರೆಗೆ ನಮ್ಮ ಮನೆಯಲ್ಲಿ ಉಳಿದು ಮರಣಹೊಂದಿರುತ್ತಾರೆ. ಅವರ ಅಂತ್ಯಸಂಸ್ಕಾರ ನಮ್ಮ ಊರಿನಯೇ ಮಾಡಿರುತ್ತೇವೆ. ಇವತ್ತಿಗೂ ಸಹ ಕೊಡಲ ಗ್ರಾಮದಲ್ಲಿ ನಮ್ಮ ತಾಯಿ ಮನೆ ಇರುತ್ತದೆ ಎಂದರೆ ಸರಿ, ಅದನ್ನು ಶಂಕರಲಿಂಗಮ್ಮನ ಮನೆ ಎಂದು ಕರೆಯುತ್ತಾರೆ ಎಂದರೆ ಸರಿ. ನನ್ನ ತಂಗಿಯ ಮದುವೆ ನಾನೇ ಮಾಡಿರುತ್ತೇನೆ. ಅವಳ ಮದುವೆಯ ಕಾಲಕ್ಕೆ 5 ಸಾವಿರ ರೂಪಾಯಿಯನ್ನು ವರದಕ್ಷಣೆಯಾಗಿ ಅವಳ

ಗಂಡನಿಗೆ ಕೊಟ್ಟಿರುತ್ತೇನೆ. 1 ಮತ್ತು 2 ನೇಪ್ರತಿವಾದಿಯರು ಅವಳ ಮದುವೆಗಾಗಿ ಯಾವುದೇ ಖರ್ಚು ಮಾಡಿರುವುದಿಲ್ಲ. ನನ್ನ ತಂದೆಯ ಮರಣ ಹೊಂದುವ ಮುಂಚೆ ನನ್ನ ತಾಯಿಯ ಬಳಿ ಇರುತ್ತಿದ್ದರಿಂದ ಅವರು ಗಳಿಸಿದ್ದ ಬಂಗಾರ ಮತ್ತು ಹಣ ನನ್ನ ತಾಯಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣದ ನಂತರ 1 ಮತ್ತು 2 ನೇ ಪ್ರತಿವಾದಿಯರು ನನ್ನ ಮತ್ತು ನನ್ನ ತಂಗಿಯ ಮದುವೆಯ ಕಾಲಕ್ಕೆ ತಲಾ 20 ತೊಲೆ ಬಂಗಾರ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ 40 ತೊಲೆ ಬಂಗಾರ ನನ್ನ ಮತ್ತು ನನ್ನ ತಂಗಿಯ ಪಾಲಿನ ಆಸ್ತಿಯಲ್ಲಿನ ಪಾಲು ಎಂದು ಹೇಳಿ ಕೊಟ್ಟಿದ್ದರು ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಯರಿಗೆ ಆಗಲಾರದ ನನ್ನ ಅಣ್ಣತಮ್ಮಕೀಯ ಜನರು ನಮ್ಮ ಮೂಲಕ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 10 ನೇ ಪ್ರತಿವಾದಿ ಪರ ವಕೀಲರಿಂದ :</u>

ನಾನು, 2 ನೇ ವಾದಿ, 1 ಮತ್ತು 2 ನೇ ಪ್ರತಿವಾದಿಯರು ಬಳಹ ವರ್ಷಗಳ ಹಿಂದೆ ಆಸ್ತಿ ಪಾಲು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರು ಮತ್ತು 1 ಹಾಗೂ 2 ನೇ ಪ್ರತಿವಾದಿಯರು ಈಗಲೂ ಸಹ ಜಂಟಿ ಕುಟುಂಬದ ಸದಸ್ಯರು ಆಗಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 10 ನೇ ಪ್ರತಿವಾದಿ ದಾವಾ ಆಸ್ತಿಯ ಪೈಕಿ ಯಾವ ಜಮೀನನ್ನು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಎಷ್ಟು ಎಕರೆ ಜಮೀನು ಖರೀದಿ ಮಾಡಿರುತ್ತಾರೆ ಎಂದು ಸಹ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಎಷ್ಟು ಹಣಕ್ಕೆ ಜಮೀನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ದಾವಾ ಆಸ್ತಿ ಖರೀದಿ ಮಾಡುವ ಕಾಲಕ್ಕೆ ಆ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇದ್ದಿತ್ತು. 10 ನೇ ಪ್ರತಿವಾದಿ ಖರೀದಿಸಿದ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಯಾವ ವರ್ಷದಲ್ಲಿ ಅಥವಾ ಎಷ್ಟು ವರ್ಷಗಳ ಹಿಂದೆ ಜಮೀನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿಗೆ ದಾವಾ ಆಸ್ತಿಯ ಪೈಕಿ ಒಂದು ಜಮೀನು ಮಾರಾಟ ಮಾಡಿದ ಬಗ್ಗೆ ನಾನು ಸಂಬಂದಪಟ್ಟ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. 10 ನೇ ಪ್ರತಿವಾದಿ ದಾವಾ ಆಸ್ತಿ ಪೈಕಿ ಒಂದು ಆಸ್ತಿ ಖರೀದಿ ಮಾಡಿದ ಸಂಗತಿ ಈ ದಾವೆ ದಾಖಲಿಸಲು ದಾಖಲೆಗಳನ್ನು ಪಡೆದುಕೊಂಡಾಗ ನನಗೆ ಗೊತ್ತಾಗಿರುತ್ತದೆ. ಆ ಸಂಗತಿ ಗೊತ್ತಾದ ನಂತರ ಸಹಾಯಕ ಆಯುಕ್ತರು ಯಾದಗಿರಿ ಅಥವಾ ಇತರ ಕಂದಾಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ 23 ಇದು ಈ ಹಿಂದೆ 1 ನೇ ಪ್ರತಿವಾದಿಯ ತಾತಾನಿಂದ 1 ನೇ ಪ್ರತಿವಾದಿಗೆ ಪಾಲುಗೆ ಬಂದ ಆಸ್ತಿಯಾಗಿದ್ದು, ಅದನ್ನು 1 ನೇ ಪ್ರತಿವಾದಿ ತನ್ನ ಕುಟುಂಬದ ಅಡಚಡಣೆಗಾಗಿ ಸದರಿ ಜಮೀನನ್ನು 10 ನೇ ಪ್ರತಿವಾದಿಗೆ ರೂ.4 ಲಕ್ಷ 23 ಸಾವಿರ ರೂಪಾಯಿಗೆ ಮಾರಾಟ ಮಾಡಿರುತ್ತಾರೆ ಎಂದರೆ

ಸಾಕ್ಷಿಯು ನಾವು ಇನ್ನೂ ಬೇರೆ ಆಗಿರುವುದಿಲ್ಲ ಮತ್ತು ಅದಕ್ಕೆ ನಾವು ಸಹಿ ಹಾಕಿರುವುದಿಲ್ಲ. ಸದರಿ ಜಮೀನನ್ನು 10 ನೇಪ್ರತಿವಾದಿ ದಿನಾಂಕಃ 29-02-2016 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾವು ಇನ್ನೂ ಬೇರೆ ಆಗಿರುವುದಿಲ್ಲ ಮತ್ತು ಅದಕ್ಕೆ ನಾವು ಸಹಿ ಹಾಕಿರುವುದಿಲ್ಲ. ಸದರಿ ದಾವಾ ಆಸ್ತಿಯ ಸರ್ವೆ ನಂಬರ 23 ರ ಮಾಲೀಕ ಮತ್ತು ಖಬ್ಜದಾರನೆಂದು 10 ನೇ ಪ್ರತಿವಾದಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಯಾವ್ಯಾವ ದಾಖಲೆಗಳನ್ನು ಪರಿಶೀಲಿಸಿರುತ್ತೇನೆಂದರೆ ನನಗೆ ಹೇಳಲು ಆಗುವುದಿಲ್ಲ. 10 ನೇ ಪ್ರತಿವಾದಿ ದಾವಾ ಆಸ್ತಿ ಸರ್ವೆ ನಂಬರ 23 ನ್ನು ಖರೀದಿ ಮಾಡಿದರಿಂದಾಗಿ ಅದನ್ನು ಅವರ ಹೆಸರಿಗೆ ವರ್ಗಾವಣೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.